**ಓ.ಎಸ್.ನಂಃ 52/2020**

**ಪಿಡಬ್ಲ್ಯೂ-3**

**<u>ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 08.09.2023 ರಂದು ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲು :ಶ್ರೀ ಜೆ ಎಸ್ ವಕೀಲರಿಂದ (1 ನೇ ಪ್ರತಿವಾದಿ ಪರವಾಗಿ)</u>**

ನಾನು 1 ನೇ ವಾದಿಗೆ ಸಂಬಂಧಿ. ನನಗೆ ಈ ಕೇಸಿನ ಪೂರ್ಣ ವಿಚಾರ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ವಾದಿಯ ವಿರುದ್ಧ ದಾವೆ ಹೂಡಿದ್ದು ನನಗೆ ಗೊತ್ತು, ಯಾವ ಕಾರಣಕ್ಕೆ ಹೂಡಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಇರುವ ವಿಚಾರಗಳು ನನಗೆ ಗೊತ್ತು. ನನ್ನ ಪ್ರಮಾಣ ಪತ್ರದಲ್ಲಿ ಇರುವ ವಿಚಾರಗಳನ್ನು 1 ನೇ ವಾದಿಯು ಹೇಳಿ ಬರೆಸಿರುತ್ತಾರೆ. ಪ್ರಮಾಣ ಪತ್ರದ ವಿಚಾರಗಳನ್ನು ನನಗೆ ಓದಿ ಹೇಳಿದ್ದು, ಅವುಗಳನ್ನು ನಾನು ಈಗ ಹೇಳುತ್ತಿದ್ದೇನೆ.

ದಾವಾಸ್ತಿಯ ಆಜೂ-ಬಾಜು ನನ್ನ ಆಸ್ತಿ ಇರುವುದಿಲ್ಲ. ದಾವಾಸ್ತಿಯ ಹತ್ತಿರ ನಾನು ದನಕರುಗಳನ್ನು ಮೇಯಿಸಲು ಹೋಗುತ್ತಿದ್ದೆ. ನನ್ನ ಪ್ರಮಾಣ ಪತ್ರದಲ್ಲಿ ದಾವಾಸ್ತಿಯ ಹತ್ತಿರ ದನ-ಕರುಗಳನ್ನು ಮೇಯಿಸಲು ಹೋಗುತ್ತಿದ್ದಾಗ ಗಲಾಟೆ ಆಯಿತು ಎಂದು ನಮೂದು ಮಾಡಿಲ್ಲ. ಯಾವ ದಿನಾಂಕದಂದು ಗಲಾಟೆ ಆಯಿತು ಎಂದು ನನಗೆ ಗೊತ್ತಿಲ್ಲ. ಗಲಾಟೆ ಆಗಿದ್ದನ್ನು ನಾನು ನೋಡಿರುವುದಿಲ್ಲ. 1 ನೇ ವಾದಿಯು ಹೇಳಿದ್ದರಿಂದ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**2 ನೇ ಪ್ರತಿವಾದಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ತಮ್ಮ ಪರವಾಗಿ ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಎ.ಎನ್.ಕಾಂತಮ್ಮ)**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ